# ಮಾನಸಿ ಪ್ರಸಾದ್–ಬಹುಮುಖ ಪ್ರತಿಭೆ.... ಕರ್ನಾಟಕ ಸಂಗೀತ ಗಾನಕೋಗಿಲೆ

ಮರಳುಗಾಡಿನಲ್ಲಿ ತನ್ನ ಐದನೇ ವರ್ಷದಲ್ಲೇ ಭರತನಾಟ್ಯ ಮತ್ತು ಸಂಗೀತದ ಮೇಲೆ ಪ್ರೀತಿ ಬೆಳೆಸಿಕೊಂಡ "ಕುವೈಟ್‌ನ ಕುಡಿ" ಈ ಮಾನಸಿ ಪ್ರಸಾದ್. ಇಂದು ಭಾರತದಲ್ಲೇ ನೆಲೆಸಿ ಕಲೆಯೆಂಬ ಉದ್ಯಾನವನದಲ್ಲಿ ಮಲ್ಲಿಗೆಯಂತೆ ಅರಳಿರುವ ಕುಸುಮವಾಗಿದ್ದಾರೆ.

ಭಾರತ ಹಾಗು ಸಿಂಗಪುರದಲ್ಲಿ ವಿದ್ಯಾಭ್ಯಾಸ, "ಕಾಂಚಾಣಕ್ಕಿಂತ ಕಲೆಗೆ ಮಹತ್ವ ನೀಡಿದ ಕಲಾವಿದೆ, ಕೋಟಿಧನ ಬೇಡ, ಸಂಗೀತ ಸುಧೆ ಸಾಕೆನಗೆ ಎಂದ ಮಾನಸಿ...." ಶಿಕ್ಷಣ ಮತ್ತು ಗಾಯನದ ಸಮರಸ, "ತಾನ್ಪುರ" ದ ಸಹವಾಸ, ನೃತ್ಯ ಕಲಾ ವಿಶಾರದೆ, ನಮ್ಮ ನಿಮ್ಮೆಲ್ಲರ ಮಾನಸಿ" ಸೃಜನಾತ್ಮಕ ಕಲಾವಿದೆ, ಜೊತೆಗೆ ವಿಶ್ಲೇಷಣಾತ್ಮಕ ಬುದ್ಧಿಜೀವಿಯೂ ಹೌದು. ಕಲೆ ಮತ್ತು ವಿಜ್ಞಾನ ಕ್ಷೇತ್ರಗಳೆರಡರಲ್ಲೂ ಪ್ರವೀಣೆ. ಸಂಗೀತವೇ ನನ್ನ ಪ್ರೇಮ, ಜೀವ ಮತ್ತು ಕನಸು ಎನ್ನುವ ಕಲಾಕುಸುಮ ಮಾನಸಿ. ಶ್ರೋತೃಗಳ ಮನಸ್ಸನ್ನು ತನ್ನ ಗಾಯನಕಲೆಯಿಂದ ಆಕರ್ಷಿಸಿ, ಗೆಲ್ಲುವ ಸಾಮರ್ಥ್ಯ ಈಕೆಗೆ ಇರುವುದನ್ನು ಗುರುತಿಸಿದ್ದುದರಿಂದಲೊ ಏನೋ, ಇವರ ಹಿರಿಯರು ಈಕೆಗೆ "ಮಾನಸಿ" ಎಂದು ನಾಮಕರಣ ಮಾಡಿದುದು ಈಗ ಅನ್ವರ್ಥವೇ ಆಗಿದೆ.

ಯಂತ್ರ ವಿಜ್ಞಾನ ಮತ್ತು ವ್ಯವಸ್ಥಾಪನಾ ಕ್ಷೇತ್ರಗಳಲ್ಲಿ ಪದವೀಧರೆ. ತನ್ನ ತಾಯಿ ತಾರಾ ಪ್ರಸಾದರಿಂದ ಗಾಯನ ಅಭ್ಯಾಸ ಮೊದಲು ಮಾಡಿದ ಇವರು ಶ್ರೀಮತಿ ಜಾನ್ಹವಿ ಜಯಪ್ರಕಾಶ್ ಮತ್ತು ಶ್ರೀ ಡಾ.ಕೆ. ವರದರಂಗನ್ ಇವರಿಂದಲೂ ಕಲಿತಿರುತ್ತಾರೆ. ತದನಂತರ ವಿದ್ವಾನ್ ಆರ್.ಕೆ. ಪದ್ಮನಾಭನ್ ರಿಂದ ಉನ್ನತ ತರಬೇತಿಯೂ ಆಗಿದೆ. ಮಾನಸಿಯವರು ತಮ್ಮ ೧೪ನೇ ಚಿಕ್ಕ ವಯಸ್ಸಿನಲ್ಲಿ ಮೊಟ್ಟಮೊದಲ ಸಂಗೀತ ಕಛೇರಿ ನಡೆಸಿಕೊಟ್ಟರು, ಜೊತೆಗೆ ಧ್ವನಿ ಸುರಳಿಯನ್ನೂ ಬಿಡುಗಡೆ ಮಾಡಿದರು. ಸಂಗೀತ ಸೀನಿಯರ್ ಹಾಗೂ ವಿದ್ವತ್ ಪರೀಕ್ಷೆಗಳಲ್ಲಿ ಅತ್ಯುನ್ನತ ಶ್ರೇಣಿಗಳಿಸಿ ತೇರ್ಗಡೆಯಾದವರು. ರಾಜ್ಯ ಹಾಗು ಕೇಂದ್ರ ಸರ್ಕಾರದ ವತಿಯಿಂದ ಕೊಡಲ್ಪಡುವ ಕಲಾಕ್ಷೇತ್ರದ "ವಿದ್ಯಾರ್ಥಿವೇತನ" ಗಳಿಸಿದವರೂ ಕೂಡ. ನೃತ್ಯ/ಸಂಗೀತ ಸಂಯೋಜನೆ, ದೂರದರ್ಶನ ಕಾರ್ಯಕ್ರಮಗಳಲ್ಲಿ ಸೂತ್ರಧಾರಿಕೆ, ವಿವಿಧ ವಿಷಯಗಳ ಮೇಲೆ ಲೇಖನ ಬರೆಯುವುದು ಮತ್ತು ಉಪನ್ಯಾಸ ಕೊಡುವುದು ಇವರ ಇತರ ಚಟುವಟಿಕೆಗಳಾಗಿವೆ.

ಕಲಾಕ್ಷೇತ್ರದಲ್ಲಿ ಹೊಸ ಪ್ರಯೋಗಗಳನ್ನು ಮಾಡುವಲ್ಲಿ ಎಂದೂ ಹಿಂಜರಿಯದ ಈಕೆ ಸೃಜನಾತ್ಮಕ ಪ್ರಯೋಗಗಳಿಗೆ ಹೆಸರಾಗಿರುತ್ತಾರೆ. ರಾಗ, ತಾನ ಪಲ್ಲವಿಗಳನ್ನು– ವಿಶೇಷವಾಗಿ ಅವಧಾನ ಪಲ್ಲವಿಯನ್ನು ಮಂಡಿಸುವಲ್ಲಿ ಇವರ ಚಾತುರ್ಯ ಪ್ರಶಂಸನೀಯ. ಇತರೇ ಹಿಂದೂಸ್ತಾನಿ ಸಂಗೀತಕಾರರೊಂದಿಗೆ ಜುಗಲಬಂದಿ ನಡೆಸುವಲ್ಲಿ ಪ್ರವೀಣೆ ಕೂಡಾ.

**ನೃತ್ಯ ಸಾಧನೆ:** ಸಂಗೀತದ ಜೊತೆಗೆ ಮಾನಸಿ ಯವರು, ಭರತನಾಟ್ಯ ನೃತ್ಯಕಲಾ ಪರಿಣಿತರೂ ಹೌದು. ತನ್ನ ೧೩ನೇ ವಯಸ್ಸಿನಲ್ಲಿ ರಂಗಪ್ರವೇಶ ಮಾಡಿದ ಈಕೆ ಶ್ರೀಮತಿ ನರ್ಮದಾರವರ ನೆಚ್ಚಿನ ವಿದ್ಯಾರ್ಥಿನಿ, ಬೆಂಗಳೂರು ನಗರ ಹಾಗೂ ಸುತ್ತಮುತ್ತ ಅನೇಕ ಪ್ರದರ್ಶನ ನೀಡಿರುವ ಈಕೆ ಪರಿಪೂರ್ಣ ನೃತ್ಯಗಾರ್ತಿ.

"ನಾದಜ್ಯೋತಿ ಮುತ್ತುಸ್ವಾಮಿ ದೀಕ್ಷಿತರ್" ಮತ್ತು "ದೇವಿ ಉಪಾಸಕ ಶ್ಯಾಮಶಾಸ್ತ್ರಿ" ಎಂಬ ರಂಗನಿರ್ಮಿತ ಕಾರ್ಯಕ್ರಮಗಳಲ್ಲಿಯೂ ನರ್ತಿಸಿರುತ್ತಾರೆ. ಇಷ್ಟೇ ಅಲ್ಲದೆ ಅತಿ ನುರಿತ, ನಾಟ್ಯಶಾಸ್ತ್ರ ಪ್ರವೀಣರಾದ ಶ್ರೀಮತಿ ನಿರುಪಮ ರಾಜೇಂದ್ರ, ಶ್ರೀಮತಿ ಶಮ, ಶ್ರೀ ಸಂಜಯಶಾಂತಾರಾಮ್, ಶ್ರೀಮತಿ ವಾಣಿ ಗಣಪತಿ, ಶ್ರೀ ಪ್ರವೀಣ್ ಕುಮಾರ್ ಇನ್ನೂ ಮುಂತಾದವರಿಗಾಗಿ ಹಾಡಿದ್ದಾರೆ.

ಸಂತ ಮೀರಾಬಾಯಿಯ ಜೀವನ, ಆಕೆಯ ಭಜನೆಗಳು, ನೃತ್ಯ ಹಾಗು ಸ್ವಗತಗಳನ್ನು ಪ್ರತಿಬಿಂಬಿಸುವ ಒಂದು ಪ್ರಯತ್ನ "ಗಿರಿಧರ ಮೀರ" ಎಂಬ ಏಕಾಭಿನಯ ಸಂಗೀತ–ನೃತ್ಯ ಕಾರ್ಯಕ್ರಮ. ಒಂದು ಘಂಟೆಯ ಈ

ಕಾರ್ಯಕ್ರಮದಲ್ಲಿ ಸಂಗೀತ ಮತ್ತು ನೃತ್ಯ ಎರಡು ಮಾನಸಿ ಒಬ್ಬರದ್ದೇ. ಇದನ್ನು ೨೦೦೫ರಲ್ಲಿ ಭಾರತದಲ್ಲಿ ಪ್ರದರ್ಶಿಸಲ್ಪಟ್ಟ ಮೊಟ್ಟಮೊದಲ ದಿಟ್ಟ ಪ್ರಯತ್ನವೆಂದೇ ಗುರುತಿಸಬಹುದು.

ಪ್ರತಿಷ್ಠಿತ ರಾಷ್ಟ್ರೀಯ ದೈನಿಕಪತ್ರಿಕೆಗಳಿಂದ ಮೆಚ್ಚುಗೆ ಗಳಿಸಿಕೊಂಡ ಈ ಪ್ರಯೋಗ ಹಲವಾರು ಎಡೆಗಳಲ್ಲಿ ಪ್ರದರ್ಶನಗೊಂಡು ಪ್ರಶಂಸೆ ಪಡೆದಿದೆ.

ಮಾನಸಿಯವರು ಜರ್ಮನಿಯಲ್ಲಿ ನಡೆದ ವಾರ್ಷಿಕೋತ್ಸವ ಸಂದರ್ಭದಲ್ಲಿ "ಭಾರತೀಯ ಸಂಸ್ಕೃತಿ" ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಿರುತ್ತಾರೆ. ಅಂತರರಾಷ್ಟ್ರೀಯ ಜನಸಂಪರ್ಕ ಮಿಲ್ಟನ್ ಸಂಸ್ಥಾನದ "ಫ಼ೆಲೋ" ಕೂಡ ಆಗಿರುತ್ತಾರೆ. ಮಾನಸಿಯವರು ನಡೆಸಿಕೊಟ್ಟಿರುವ ಕೆಲವು ಪ್ರದರ್ಶನಗಳ ಪಟ್ಟಿ ಈ ಕೆಳಗಿನಂತಿದೆ......

ಬೆಂಗಳೂರಿನಲ್ಲಿ–

- ರಾಜ ಭವನ, ರಾಜ್ಯಪಾಲರ ವಾಸಸ್ಥಾನ(ಮಾಜಿ ರಾಜ್ಯಪಾಲರಾದ ಶ್ರೀಮತಿ ರಮಾದೇವಿಯವರ ಉಪಸ್ಥಿತಿಯಲ್ಲಿ)
- ಬೆಂಗಳೂರು ಗಾಯನ ಸಮಾಜ,೩೩ನೇ ವಾರ್ಷಿಕ ಸಂಗೀತ ವಂದನಾರ್ಪಣಾ ಸಮಾರಂಭ(ರಾಜ್ಯದ ಮುಖ್ಯ ಮಂತ್ರಿ ಎಸ್.ಎಮ್.ಕೃಷ್ಣರವರ ಉಪಸ್ಥಿತಿಯಲ್ಲಿ)
- ಕೋಟೆ ಪ್ರೌಢಶಾಲೆ– ರಾಮನವಮಿ ಉತ್ಸವ
- ಅನನ್ಯ ವೃಂದದವರು ನಡೆಸಿಕೊಟ್ಟ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭ
- ಮಲ್ಲೇಶ್ವರಮ್ ಸಂಗೀತ ಸಭಾ
- ಶ್ರೀ ರಾಮ ಲಲಿತ ಕಲಾ ಮಂದಿರ
- ಇಂದಿರಾನಗರ ಸಂಗೀತ ಸಭಾ

ಬೆಂಗಳೂರಿನಿಂದ ಹೊರಗೆ–

- ಸಂಗೀತ ಅಕಾಡೆಮಿ–ಚೆನ್ನೈ
- ನಾರದ ಗಾನ ಸಭಾ–ಚೆನ್ನೈ
- ಭಾರತ ಸಂಗೀತ ಉತ್ಸವ–ಚೆನ್ನೈ
- ನಾದ ಇಣ್ಬಂ–ಚೆನ್ನೈ
- ಸಿ.ಎಮ್.ಎ.ಎನ್.ಎ–ನ್ಯೂ ಜೆರ್ಸಿ–ಅಮೇರಿಕ
- ಶ್ರೀ ಶಣ್ಮುಖಾನಂದ ಫ಼ೈನ್ ಆರ್ಟ್ಸ್–ಮುಂಬೈ
- ಮೈಸೂರ್ ಅಸೋಸಿಯೇಶನ್–ಮುಂಬೈ
- ಭಕ್ತ ರಸಿಕ ರಂಜನಿ ಸಭಾ–ಮುಂಬೈ
- ಗಾನ ಭಾರತಿ–ಮೈಸೂರು
- ನಾದ ಸುಧಾ–ಶಿವಮೊಗ್ಗ
- ಗಾನ ಸುಧಾ–ಹುಬ್ಬಿ
- ಶ್ರೀ ಕೃಷ್ಣ ಗಾನ ಸಭಾ–ಅದೋಣಿ

- ಸಪ್ತ ಸ್ವರ ಸಂಗೀತ ಸಭಾ–ಹಾಸನ
- ಶ್ರೀ ಅನಂತ ಪದ್ಮನಾಭಸ್ವಾಮಿ ಸಭಾ–ಹಿಂದೂಪುರ

ಮಾನಸಿ ಪ್ರಸಾದರಿಗೆ ಅವರ ಕಲಾ ಪರಿಶ್ರಮಕ್ಕೆ ಸಂದ ಅನೇಕ ಗೌರವ, ಬಿರುದು, ಪಾರಿತೋಷಕಗಳ ಪಟ್ಟಿ ಕೊನೆ ಮೊದಲಿಲ್ಲದ್ದು. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.....

- ರೋಟರಿ ಬ್ರಿಗೇಡ್ ಯಂಗ್ ಅಚೀವರ್ಸ್ ಅವಾರ್ಡ್
- ಶ್ರೀ ಟಿ.ವ್. ಸುಬ್ಬಾರಾವ್ ಮೆಮೋರಿಯಲ್ ಅವಾರ್ಡ್–ಮ್ಯೂಸಿಕ್ ಅಕಾಡೆಮಿ ಚೆನ್ನೈ
- ಶ್ರೀ ಶಣ್ಮುಖಾನಂದ ಎ.ಕೆ. ಶಟಗೋಪನ್ ಯುವ ಕಲಾಕಾರ ಪುರಸ್ಕಾರ–೨೦೦೪ ಮತ್ತು ೨೦೦೫ ಮುಂಬೈ
- ಕರ್ನಾಟಕ ಗಾನಕಲಾ ಪರಿಷತ್ತಿನ ವಾರ್ಷಿಕೋತ್ಸವ ಸಂದರ್ಭದಲ್ಲಿ "ಅತ್ಯುತ್ತಮ ಉಪನ್ಯಾಸ–ಪ್ರದರ್ಶನ ಪ್ರಶಸ್ತಿ"
- "ಕರ್ನಾಟಕ ಗಾನಕಲಾ ಪರಿಷತ್ತು"ಉಡುಪಿಯಲ್ಲಿ "ಅತ್ಯುತ್ತಮ ಯುವ ಗಾಯಕಿ ಪ್ರಶಸ್ತಿ"
- ನಾದಜ್ಯೋತಿ ತ್ಯಾಗರಾಜ ಭಜನಾ ಸಭಾ ಏರ್ಪಡಿಸಿದ ಯುವೋತ್ಸವ–೨೦೦೦ದಲ್ಲಿ "ಅನನ್ಯ ಪ್ರತಿಭೆ" ಪ್ರಶಸ್ತಿ
- ಶ್ರೀ ಡಿ.ಸುಬ್ಬರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್– ರವರಿಂದ "ಸಂಗೀತ ಕೌಸ್ತುಭ" ಪ್ರಶಸ್ತಿ
- ಆರ್ಯಭಟ ಸಾಂಸ್ಕೃತಿಕ ಪ್ರಶಸ್ತಿ–೧೯೯೭
- ಬಿ.ಎನ್. ಸುರೇಶ್  ಸ್ಮಾರಕ ಪ್ರಶಸ್ತಿ
- ಕುವೈತ್–ನಲ್ಲಿ ನೆಹರು ಶತಮಾನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ

ಮಾನಸಿಯವರ ಕೆಲವು ಸಾಧನೆಗಳು :

- ಆಕಾಶವಾಣಿ, ಬೆಂಗಳೂರು, ಇಲ್ಲಿ ಬಿ–ಉನ್ನತಶ್ರೇಣಿ ಕಲಾವಿದೆ
- ೧೪ನೇ ವಯಸ್ಸಿನಲ್ಲೇ ಪ್ರಥಮ ಧ್ವನಿಸುರುಳಿಯ ಬಿಡುಗಡೆ
- ಸ್ವರ–ಚಿತ್ರ ಸುರುಳಿ ಬಿಡುಗಡೆ:
  ಸಮರ್ಪಣ ಮತ್ತು ಭಜಮಾನಸ–೨೦೦೧
  ಮೀರಾ ಮಾಧುರಿ–೨೦೦೫
  ವಾಗ್ಧೀಶ್ವರಿ ಮತ್ತು ದೇವೀಕೃತಿಗಳು
- ಸೀನಿಯರ್ ಗ್ರೇಡ್ ಮತ್ತು ವಿದ್ವತ್ ಸಂಗೀತ ಪರೀಕ್ಷೆಗಳಲ್ಲಿ ದ್ವಿತೀಯ ರ್‍ಯಾಂಕ್
- ಕೇಂದ್ರ ಸರ್ಕಾರದ ವತಿಯಿಂದ ಸಂಗೀತ ವಿದ್ಯಾರ್ಥಿ ವೇತನ.
- ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ ಹಾಗು ಶ್ರೀ ಡಿ. ಸುಬ್ಬರಾಮಯ್ಯ ಲಲಿತಕಲಾ ಟ್ರಸ್ಟ್ ಇವರಿಂದ ವಿಧ್ಯಾರ್ಥಿ ವೇತನ.
- ಚಿಲಿ ಮತ್ತು ದಕ್ಷಿಣ ಅಮೇರಿಕ ರಾಷ್ಟ್ರಗಳ ಎರಡು ವಿಶ್ವವಿದ್ಯಾಲಯಗಳಲ್ಲಿ ಭಾರತೀಯ ನೃತ್ಯ ಮತ್ತು ಸಂಗೀತ ಪ್ರದರ್ಶನ.

- ಬೆಂಗಳೂರು ಗಾಯನ ಸಮಾಜದಲ್ಲಿ "ಗಿರಿಧರ ಮೀರ" ಎಂಬ ನೃತ್ಯ ನಾಟಕವನ್ನು ಕಲ್ಪಿಸಿ, ನಿರ್ದೇಶಿಸಿ, ತುಂಬಿದ ಸಭೆಯಲ್ಲಿ ಪ್ರದರ್ಶಿಸಿದರು. ಈ ಕಾರ್ಯಕ್ರಮದ ನೃತ್ಯ ನಿರ್ದೇಶನ, ಹಾಡುಗಾರಿಕೆ ಹಾಗು ಪ್ರಸ್ತುತಿ ಎಲ್ಲವೂ ಮಾನಸಿ ಒಬ್ಬರದ್ದೆ.
- ಉದಯ ಟಿವಿ, ಈ ಟಿವಿ, ಚಂದನ ಮತ್ತು ಪ್ರೈಮ್ ೧೨, ಸಿಂಗಪುರ್ ನಲ್ಲಿ ಹಾಡುಗಾರಿಕೆ.
- ಈ ಟಿವಿಯ "ಎದೆ ತುಂಬಿ ಹಾಡುವೆನು" ಕಾರ್ಯಕ್ರಮದಲ್ಲಿ ಶ್ರೀ ಎಸ್.ಪಿ. ಬಾಲಸುಬ್ರಮಣ್ಯಮ್ ರವರೊಂದಿಗೆ ಹಾಡುಗಾರಿಕೆ.
- ಅವಧಾನ ಪಲ್ಲವಿಯ ಹಲವಾರು ಕಛೇರಿಗಳಲ್ಲಿ ಅತ್ಯದ್ಭುತ ಪ್ರದರ್ಶನ.

ಇಂತಹ ಬಹುಮುಖ ಪ್ರತಿಭಾವಂತೆಯನ್ನು ಕುವೈತ್ ಗೆ ಹೆಮ್ಮೆಯಿಂದ ಅಹ್ವಾನಿಸಿ ಅವರ ಕಲಾ ಪ್ರದರ್ಶನದ ರುಚಿಯನ್ನು ಸವಿಯೋಣ.